

**ಅಂತರ್ಜಾಲದಲ್ಲಿ ಇವನ್ನು ಓದಿ**
**ಗಾಂಧಿ ಆತ್ಮಚರಿತ್ರೆ:**
mkgandhi.org/linktoautobio.htm
**ಗಾಂಧಿ ಸಿನಿಮಾದ ಚಿತ್ರಕಥೆ:**
sfy.ru/?script=gandhi

ಮಾತನಾಡಿದರೆ, ದೃಶ್ಯದ ಅರ್ಧಭಾಗದಿಂದ ಬೆಕರ್ ಆದಿಯಾಗಿ ಇತರರೂ ಕುಳಿತಿದ್ದು ಗಾಂಧಿ ನಿಂತು ಮಾತನಾಡುತ್ತಾರೆ. ಈ ಕುಳಿತಿರುವ, ಅನಂತರ ನಿಂತಿರುವ ಕ್ರಿಯೆಯನ್ನು ಸಂಯೋಜಿಸುವ ಮೂಲಕ ಮುಂದಿನ ಹೋರಾಟಕ್ಕೆ ಗಾಂಧಿ ಸಿದ್ಧವಾಗಿರುವ ಮನಸ್ಥಿತಿಯನ್ನು ಸೂಚಿಸುತ್ತಾರೆ.

ಮುಂದಿನ ದೃಶ್ಯ ಮಸೀದಿಯೊಂದರ ಮುಂದಿನ ಬಯಲಿನಲ್ಲಿ ನಡೆಯುತ್ತದೆ. ಇದು ಬಸ್‌ಪಾಸ್‌ಗಳನ್ನು ಸುಡುವ ಮೂಲಕ ಪ್ರತಿಭಟನೆ ದಾಖಲಿಸುವ ಸನ್ನಿವೇಶ. ಇಲ್ಲಿ ಹಿಂದೂ, ಮುಸ್ಲಿಂ, ಸಿಖ್ ಬಾಂಧವರೆಲ್ಲ ಗಾಂಧಿಯ ನೇತೃತ್ವದಲ್ಲಿ ನೆರೆದಿದ್ದಾರೆ. ಪೊಲೀಸರೂ ಇದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು, ಗಾಂಧಿಯ ಮುಖದಲ್ಲಿ ಮೂಡಿರುವ ಮೀಸೆ. ಹಿಂದಿನ ಎರಡು ದೃಶ್ಯಗಳಲ್ಲಿ ಇಲ್ಲದಿರುವ ಮೀಸೆ ಇಲ್ಲಿದೆ. ಮೀಸೆ ಯಾವುದರ ಸಂಕೇತ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ನಂತರದ ಒಂದು ದೃಶ್ಯದಲ್ಲಿ ಚಾರ್ಲಿ ಎಂಬ ಪಾದ್ರಿ ಗಾಂಧಿಯನ್ನು ಭೇಟಿ ಮಾಡಲು ಬರುತ್ತಾನೆ. ತನ್ನನ್ನು ಪರಿಚಯಿಸಿಕೊಂಡು, 'ನೀವೇ ಅಲ್ಲವೇ ಗಾಂಧಿ?' ಎಂದು ಕೇಳುತ್ತಾನೆ. ಗಾಂಧಿ ಹೌದೆನ್ನುವಂತೆ ತಲೆಯಾಡಿಸುತ್ತಾರೆ. ಚಾರ್ಲಿ ಗಾಂಧಿಯನ್ನು ಆಪಾದಮಸ್ತಕ ನೋಡಿ ಹೇಳುತ್ತಾನೆ: 'ನಾನಂದುಕೊಂಡಿದ್ದೆ, ನೀವು ದೊಡ್ಡ ವ್ಯಕ್ತಿ (ಮೈಕಟ್ಟಿನಲ್ಲಿ) ಅಂತ...' ಅದಕ್ಕೆ ಗಾಂಧಿ, ಒಮ್ಮೆ ತನ್ನ ದೇಹವನ್ನು ಗಮನಿಸಿ, 'ಐ ಯಾಮ್ ಸಾರಿ' ಎನ್ನುತ್ತಾರೆ. ಈ ಮಾತುಗಳ ಧ್ವನಿಶಕ್ತಿಯನ್ನೂ ಗಮನಿಸಬಹುದು. ದೈಹಿಕವಾಗಿ ಗಾಂಧಿ ದಷ್ಟಪುಷ್ಟರಲ್ಲದಿರಬಹುದು. ಆದರೆ, ಅವರ ಅಂತರಂಗದ ಶಕ್ತಿ ಅಗಾಧವಾದುದು ಎಂಬುದನ್ನು ಈ ಮಾತುಗಳ ಮೂಲಕ ಹೇಳಿಸಲಾಗಿದೆ.

ಇನ್ನೊಂದು ದೃಶ್ಯದಲ್ಲಿ, ಕೆಲವು ಗಣಿಕಾರ್ಮಿಕರನ್ನು ಬಂಧಿಸಿದ ಹಿನ್ನೆಲೆಯಲ್ಲಿ ಗಾಂಧಿ ಮಿಕ್ಕ ಗಣಿ ಕೆಲಸಗಾರರೊಂದಿಗೆ ಹೋರಾಟಕ್ಕೆ ಇಳಿದಿದ್ದಾರೆ. 'ಒಬ್ಬ ದೊರೆ; ಒಂದು ಕಾನೂನು' ಎಂಬ ಬ್ಯಾನರ್‌ಗಳನ್ನು ಹಿಡಿದು ಮೆರವಣಿಗೆಯಲ್ಲಿ ನಡೆದು ಬರುತ್ತಿದ್ದಾರೆ. ಆಗ ಅವರನ್ನು ಮಣಿಸಲು ಸುಮಾರು ಇಪ್ಪತ್ತಕ್ಕೂ ಹೆಚ್ಚಿನ ಅಶ್ವದಳದ ಪೊಲೀಸರು ಲಾಠಿ ಹಿಡಿದು ಬರುತ್ತಾರೆ. ಮೆರವಣಿಗೆಯನ್ನು ಬೆದರಿಸಿ ಚದುರಿಸಲು ಕುದುರೆಗಳನ್ನು ಅವರತ್ತ ನಾಗಾಲೋಟದಲ್ಲಿ ಓಡಿಸಿಕೊಂಡು ಬರುತ್ತಾರೆ. ಆಗ ಕಾರ್ಮಿಕರಲ್ಲೊಬ್ಬ ಎಲ್ಲರನ್ನೂ ನೆಲದ ಮೇಲೆ ಮಲಗಲು ಸೂಚಿಸುತ್ತಾನೆ. ಗಾಂಧಿಯನ್ನೊಳಗೊಂಡು ಎಲ್ಲರೂ ರಸ್ತೆಯ ಉದ್ದಕ್ಕೂ ಮಕಾಡೆ ಮಲಗುತ್ತಾರೆ. ಓಡಿ ಬಂದ ಅಶ್ವಗಳು ಅವರ ಮೇಲೆ ಹಾದುಹೋಗಲು ನಿರಾಕರಿಸಿ ನಿಂತಲ್ಲೇ ಕೆನೆಯುತ್ತವೆ. ಪೊಲೀಸರಿಗೆ ಅವುಗಳ ಒಂದು ಹೆಜ್ಜೆಯನ್ನೂ ಮುಂದಿಡಿಸಲು ಸಾಧ್ಯವಾಗುವುದಿಲ್ಲ. ಗಣಿಯ ದೂಳಿನ ಆವರಣದಲ್ಲಿ ಚಿತ್ರಿತವಾಗಿರುವ ಈ ಅದ್ಭುತ ದೃಶ್ಯ – ಮನುಷ್ಯ ಮನುಷ್ಯನ ಮೇಲೆ ಸವಾರಿ ಮಾಡಬಹುದು, ಆದರೆ ಪ್ರಾಣಿಗಳು ಮನುಷ್ಯನನ್ನು ತುಳಿಯುವುದಿಲ್ಲ ಎಂಬುದನ್ನು ಸೂಚಿಸುವಂತಿದೆ. ಇದನ್ನೇ ಮಾತುಗಳ ಮೂಲಕ ಹೇಳಿಸಿದ್ದರೆ ದೃಶ್ಯ ವಾಚ್ಯವಾಗಿ ಹೋಗುತ್ತಿತ್ತು.

ದಕ್ಷಿಣ ಆಫ್ರಿಕಾದಿಂದ ಗಾಂಧಿ ಭಾರತಕ್ಕೆ ಹಿಂತಿರುಗಿದ ಮೇಲೆ ಚಿತ್ರದಲ್ಲಿ ಬರುವ ಎರಡು ಕೋರ್ಟ್ ದೃಶ್ಯಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಮೊದಲ ಕೋರ್ಟ್ ದೃಶ್ಯದಲ್ಲಿ ಜಡ್ಜ್ ಅನ್ನು Low angle (ಕೆಳಗಿನ ಕೋನ) ಮತ್ತು ಗಾಂಧಿಯನ್ನು High angle (ಮೇಲಿನ ಕೋನ) ನಿಂದ ಚಿತ್ರೀಕರಿಸಿದ್ದರೆ, ಎರಡನೇ ದೃಶ್ಯದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಬ್ರಿಟಿಷ್ ನ್ಯಾಯಾಧೀಶರನ್ನು High angleನಿಂದಲೂ ಕಟಕಟೆಯಲ್ಲಿರುವ ಗಾಂಧಿಯನ್ನು Low angle ಮೂಲಕವೂ ತೋರಿಸುವ ಮೂಲಕ ಬಿಂಬ ರಾಜಕೀಯವನ್ನು ನಿರ್ದೇಶಕರು ಸೂಚಿಸುತ್ತಾರೆ.

ಮೇಲಿನ ಯಾವ ಅಂಶಗಳೂ ಚಲನಚಿತ್ರದ ವಿಮರ್ಶೆಯಲ್ಲ; ಅದು ಒಂದು ಚಲನಚಿತ್ರವನ್ನು ಆಸ್ವಾದಿಸುವ ಕ್ರಮ ಅಷ್ಟೆ. ಇಂಥ ಅನೇಕ ದೃಶ್ಯಗಳು ಚಿತ್ರದುದ್ದಕ್ಕೂ ಹರಡಿಕೊಂಡಿವೆ. ಸುಮಾರು ಮೂರು ಗಂಟೆ ಹನ್ನೊಂದು ನಿಮಿಷಗಳ 'ಗಾಂಧಿ' ಚಿತ್ರದುದ್ದಕ್ಕೂ ಸಾಧ್ಯವಾಗಿರುವ ಕುಸುರಿ ಕೆಲಸ (ಚಲನಚಿತ್ರವನ್ನು ಮತ್ತಷ್ಟು ಬಗೆಯುವ ಕ್ರಮ) ವಿನೂತನವಾಗಿದೆ.

ಸಿನಿಮಾ ನೋಡುವ ಮುಂಚೆ, ಗಾಂಧಿಯ ಆತ್ಮಕಥೆಯನ್ನೂ ಓದಿದರೆ, ಚಿತ್ರಕಥೆಯನ್ನೂ ಗಮನಿಸಿ ಅನಂತರ ಚಿತ್ರವನ್ನೂ ವೀಕ್ಷಿಸಿದರೆ ಚಿತ್ರ ನಮ್ಮ ಮುಂದೆ ಚಲನಚಿತ್ರ ಅರಳುವ ಬಗೆಯೇ ವಿಶಿಷ್ಟ.

**For men may come and men may go, but Gandhi goes on forever** – ಈ ವಾಕ್ಯದಲ್ಲಿ **`men'** ಇರುವ ಕಡೆ **'movie'** ಎಂದು ಹಾಕಿಕೊಂಡರೆ ಏನೂ ತಪ್ಪಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**


# ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
**ಗುರೂಜಿ ಮಹೇಶ್‌ಭಟ್**

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
**"ಗುರೂಜಿ ಮಹೇಶ್‌ಭಟ್"**
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

**ಗುರೂಜಿ ಮಹೇಶ್‌ಭಟ್**
**9686999517**